SRI M. VEERAPPA MOILY:– Whatever system we adopt it should not be a hypocracy. That is what I believe.

SRI C. BYRE GOWDA:– Inquiry must be initiated since beginning.

ಶ್ರೀ ವೈ.ಕೆ. ರಾಮಯ್ಯ:– ಮೊಗುಮ್ಮಾಗಿ ಹೇಳುವುದಕ್ಕೆ ಬದಲು ನೇರವಾಗಿ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ:– ನಮ್ಮದು ಏನೂ ಇಲ್ಲ. I am as open as you. ಆದುದರಿಂದ ಈ ಬಾಟ್ಲಿಂಗ್ ನಿಬಂಧನೆ ಇರುವಾಗ ಬಾಟ್ಲಿಂಗ್ ಮಾಡದೇ ಸ್ಯಾಚೆಟ್ ಮುಖಾಂತರ ಕೊಡತಕ್ಕಂಥದ್ದು ಸರಿಯಲ್ಲವೆಂದು ಹೇಳಿ ಎರಡು ತಿಂಗಳಿಂದ ನಾವು ಅದನ್ನು.....

ಶ್ರೀ ಸಿ. ಬೈರೇಗೌಡ:– ತಪ್ಪಾಗಿ ಅರ್ಥ ಮಾಡಿಕೊಂಡಿದ್ದೀರಿ. ಸ್ಯಾಚೆಟ್ ಮಾರಾಟ ಮಾಡುವಂಥದ್ದು ಈಗ ಕಾನೂನಿನಲ್ಲಿ ಅವಕಾಶವಿಲ್ಲ. ಅದನ್ನು ಕಳ್ಳತನದಲ್ಲಿ ಮಾರಾಟ ಮಾಡುತ್ತಿದ್ದಾರೆ. ಅದನ್ನು ತಾವು ದಯಮಾಡಿ ಗಮನಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:– ಕಳ್ಳತನದಲ್ಲಿ ಮಾರಾಟ ಮಾಡಬಾರದೆಂದು ಕಟ್ಟುನಿಟ್ಟಾದ ಕಾರ್ಯಕ್ರಮ ತೆಗೆದುಕೊಂಡ ಮೇಲೆ ಈ ಬಾಟ್ಲಿಂಗ್ ಯೂನಿಟ್‌ನವರು ಬಾಟ್ಲಿಂಗ್ ಸಪ್ಲೈ ಮಾಡಲಿಕ್ಕೆ ಬೇಕಾದಂತಹ ವ್ಯವಸ್ಥೆ ಎರಡು ತಿಂಗಳಲ್ಲಿ ಮಾಡಿದ್ದಾರೆ. Capacity they have created. ಆದರಿಂದ ಆ ಪ್ರಶ್ನೆ ಇರುವುದಿಲ್ಲ. ಬಾಟ್ಲಿಂಗ್ ಕ್ರಯ ಜಾಸ್ತಿಯಾಗುತ್ತದೆ. ಹೆಚ್ಚು ದುಬಾರಿಯಾಗುತ್ತದೆ. ಅಂದರೆ ಆಗ ಬಾಟ್ಲಿಂಗ್ ಕೈ ಬಿಡಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ:– ಆಂಧ್ರಪ್ರದೇಶದಲ್ಲಿ ಸರ್ಕಾರ ಇವತ್ತು ಸ್ಯಾಚೆಟ್‌ನಲ್ಲಿ ಸಾರಾಯಿ ಮಾರಾಟ ಮಾಡುತ್ತಿವೆ ನೀವು ಅದನ್ನು ದಯವಿಟ್ಟು ಗಮನಿಸಿ. ನಮ್ಮ ರಾಜ್ಯದಲ್ಲೂ ಸಹಾ ಸ್ಯಾಚೆಟ್‌ನಲ್ಲಿ ಕೇವಲ ಒಂದು ಬಲ್ಕ್ ಲೀಟರ್‌ನ್ನು ಕೇವಲ ಎರಡು ರೂಪಾಯಿನಲ್ಲಿ ಪ್ಯಾಕ್ ಮಾಡತಕ್ಕಂಥ ಅವಕಾಶ ಇದೆ. ಅದನ್ನು ಆಂಧ್ರ ಪ್ರದೇಶದಲ್ಲಿ ಆಳವಡಿಸಿದ್ದಾರೆ. ಅದನ್ನು ಜಾರಿಗೆ ತರುತ್ತೀರಾ.

ಶ್ರೀ ಎಂ. ವೀರಪ್ಪಮೊಯಿಲಿ:– ನಿಮ್ಮ ಪ್ರಶ್ನೆಯಂತೆ ಬಾಟ್ಲಿಂಗ್‌ನಲ್ಲಿ ಮಾಡಬೇಕೆ, ಸ್ಯಾಚೆಟ್‌ನಲ್ಲಿ ಮಾಡಬೇಕೆ ಎಂದು ಎರಡು ಪ್ರಶ್ನೆ ಇದೆ. ಈಗ ಸ್ಯಾಚೆಟ್‌ನಲ್ಲಿ ಮಾಡಿದರೆ ಅದರಿಂದ ಸಾಕಷ್ಟು ಇಲ್‌ಲೀಗಲ್ ಮಾಡಬಹುದು ಮತ್ತು ಸ್ಯಾಚೆಟ್‌ನಿಂದ ತೊಂದರೆ ಆಗಬಹುದು ಎಂಬ ಶಂಕೆ ಇದೆ. ಆದ್ದರಿಂದ ತಾವು ಏನು ಸೂಚನೆ ಕೊಟ್ಟಿದ್ದೀರ ಅದನ್ನು ಪುನಃ ವಿಚಾರ ಮಾಡೋಣ.

ಕರ್ನಾಟಕದಲ್ಲಿ ನಡೆದ ಕೋಮು ಗಲಭೆಯಲ್ಲಿ ಸತ್ತವರ ಸಂಖ್ಯೆ

86 (759) ಶ್ರೀ ಎ. ಎಂ. ಹಿಂಡುಸಗೇರಿ (ಹುಬ್ಬಳ್ಳಿನಗರ):–

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಇತ್ತೀಚಿನ ಮತೀಯ ಗಲಭೆಯಲ್ಲಿ ಮೃತಪಟ್ಟವರ ಹಾಗೂ ಗಾಯಗೊಂಡಿರುವ ಒಟ್ಟು ಸಂಖ್ಯೆ; (ಕೋಮುವಾರು ಸಂಖ್ಯೆ ಒದಗಿಸುವುದು):

ಆ) ಮೃತಪಟ್ಟವರ ಹಾಗೂ ಗಾಯಗೊಂಡವರ, ಕುಟುಂಬಗಳಿಗೆ ನೀಡಲಾದ ಒಟ್ಟು ಪರಿಹಾರ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ಮೃತಪಟ್ಟವರ ಸಂಖ್ಯೆ 78

ಗಾಯಗೊಂಡವರ ಸಂಖ್ಯೆ 1035

ಆ) ರೂ. 92,39.000 ಅಲ್ಲದೆ ಮೃತಪಟ್ಟ ವ್ಯಕ್ತಿಗಳ ಸಂಬಂಧಿಕರಿಗೆ ತಲಾ ಒಂದು ಲಕ್ಷ ರೂಪಾಯಿಗಳ ಹೆಚ್ಚುವರಿ ಪರಿಹಾರ ಧನ ನೀಡಲು ಆದೇಶಿಸಲಾಗಿದೆ.

ಶ್ರೀ ಎ.ಎಂ. ಹಿಂಡಸಗೇರಿ:– ಅಧ್ಯಕ್ಷರೇ ಈವರೆಗೆ ಯಾರು ಕೋಮು ಗಲಭೆಯಿಂದ ಮೃತಪಟ್ಟಿದ್ದಾರೆ ಅವರಿಗೆ ತೊಂಬತ್ತೆರಡು ಲಕ್ಷದ ಮೂವತ್ತೊಂಬತ್ತು ಸಾವಿರ ರೂಪಾಯಿ ಸಹಾಯ ಧನವನ್ನು ಕೊಟ್ಟಿದ್ದೇವೆಂದು ಮಂತ್ರಿಗಳು ಹೇಳಿದ್ದಾರೆ. ಆದರೆ ಇದುವರೆಗೂ ನಮ್ಮ ಮಹಾನಗರದಲ್ಲಿ ಯಾರು ಇಂಜುರ್ಡ್ ಆಗಿದ್ದಾರೆ ಮತ್ತು ಆಸ್ತಿಪಾಸ್ತಿ ನಷ್ಟವಾಗಿದೆ ಅವರಿಗೆ ಇದುವರೆಗೆ ಸರಿಯಾದ ಪರಿಹಾರ ಧನ ಸಿಗಲಿಲ್ಲ ಮತ್ತು ಯಾರು ವ್ಯಾಪಾರಸ್ಥರಿಗೆ ಲುಕ್ಸಾನು ಆಗಿದೆ. ಅವರು ಬಡ್ಡಿ ರಹಿತ ಸಾಲವನ್ನು ಕೇಳಿದ್ದಾರೆ. ಇದುವರೆಗೂ ಆ ಸಾಲವನ್ನು ಸಹಾ ಮಂಜೂರು ಮಾಡಿಲ್ಲ. ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ ಆದಷ್ಟು ಬೇಗನೆ ಅವರಿಗೆ ಸಹಾಯಧನ ಮತ್ತು ಬಡ್ಡಿ ರಹಿತ ಸಾಲವನ್ನು ಕೊಡಿಸುವುದಕ್ಕೆ ಸರ್ಕಾರ ಆದೇಶ ಕೊಡಬೇಕೆಂದು ಕೋರುತ್ತೇನೆ.

ಶ್ರೀ ರಮಾನಾಥ್ ರೈ:– ಸನ್ಮಾನ್ಯ ಅಧ್ಯಕ್ಷರೇ ಈಗಾಗಲೇ ಮತೀಯ ಗಲಭೆಯಿಂದ ಪ್ರಾಣ ಕಳೆದುಕೊಂಡವರಿಗೆ ರಾಜ್ಯ ಸರ್ಕಾರ ಒಂದು ಲಕ್ಷ ಹಾಗೂ ಪ್ರಧಾನ ಮಂತ್ರಿಗಳ ಪರಿಹಾರ ನಿಧಿಯಿಂದ ಒಂದು ಲಕ್ಷ ತಲಾ ಎರಡು ಲಕ್ಷ ರೂಪಾಯಿಗಳನ್ನು ಮೃತ ಪಟ್ಟಿರುವವರಿಗೆ ಕೊಡಲಾಗಿದೆ. ರಾಜ್ಯದಲ್ಲಿ ಆದ ಹಾನಿಯ ಅಂದಾಜು 70,58,763. ಪರಿಹಾರ ಧನವಾಗಿ ಇಲ್ಲಿಯವರೆಗೆ 1,36,26.900 ರೂಪಾಯಿಗಳನ್ನು ಈಗಾಗಲೇ ವಿತರಣೆ ಮಾಡಲಾಗಿದೆ. ಅದೇ ರೀತಿಯಲ್ಲಿ ಬ್ಯಾಂಕ್‌ನಿಂದ ಸಾಲ ಕೊಡಿಸ ತಕ್ಕಂಥ ಕಾರ್ಯವನ್ನು ಮಾಡುತ್ತೇವೆಂದು ಸರ್ಕಾರ ಮಾತು ಕೊಟ್ಟಿದೆ. ಆ ಮಾತಿನಂತೆ ಈಗಾಗಲೇ ಲೀಡ್ ಬ್ಯಾಂಕ್‌ನಲ್ಲಿ ವ್ಯವಹರಿಸಿ ಒಂದು ವರ್ಷದವರೆಗೆ ಸಾಲ ಮಂಜೂರು ಮಾಡುವಂತೆ ನಾವು ವ್ಯವಹರಿಸಿ ಮಾತುಕತೆ ನಡೆಸಿದ್ದೇವೆ. ಈ ಪರಿಹಾರ ಕೊಡುವ ದೃಷ್ಟಿಯಲ್ಲಿ ನಾವು ಹೆಚ್ಚಾಗಿ ಪರಿಣಾಮಕಾರಿಯಾಗಿ ಪ್ರಯತ್ನಪಡುತ್ತಿದ್ದೇವೆನ್ನುವ ಮಾತನ್ನು ಹೇಳಬಯಸುತ್ತೇನೆ.

11.40 ಎ.ಎಂ.

ಶ್ರೀ ಎ.ಎಂ. ಹಿಂಡಸಗೇರಿ:– ನಮ್ಮ ಕಡೆ ಇಲ್ಲಿಯವರೆಗೆ ಆ ಹಣವನ್ನು ಕೊಟ್ಟಿಲ್ಲ. ದಯವಿಟ್ಟು ಸರ್ಕಾರ ಆ ಹಣವನ್ನು ಕೊಡಿಸಬೇಕು. ಇನ್ನು ಎರಡನೆಯದಾಗಿ ಅನ್‌ನೆಸಸರಿಯಾಗಿ ಇನ್ನೋಸೆಂಟ್ ಪೀಪಲ್ ಮೇಲೆ ಕೇಸ್ ಹಾಕಲಾಗಿದೆ. ತಾವು ದಯವಿಟ್ಟು ಆ ಕೇಸ್‌ಗಳನ್ನು ವಿಥ್–ಡ್ರಾ ಮಾಡುತ್ತೀರಾ ?

ಶ್ರೀ ರಮಾನಾಥ ರೈ:– ಸನ್ಮಾನ್ಯ ಅಧ್ಯಕ್ಷರೆ, ಇನ್ನೂ ಪರಿಹಾರ ಕೊಡದಿದ್ದರೇ ಆದಷ್ಟು ಬೇಗ ಸಂಬಂಧಪಟ್ಟವರಿಗೆ ತಿಳಿಸಿ ಪರಿಹಾರ ಕೊಡಿಸಲು ವ್ಯವಸ್ಥೆ ಮಾಡುತ್ತೇವೆ. ಕೇಸ್‌ಗಳನ್ನು ವಿಥ್‌ಡ್ರಾ ಮಾಡುವ ಬಗ್ಗೆ ಪ್ರತ್ಯೇಕವಾಗಿ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇವೆ.

ಶ್ರೀ ಶಫೀ ಅಹ್ಮದ್:– ಮಾನ್ಯ ಹಿಂಡಸಗೇರಿಯವರ ಪ್ರಶ್ನೆಗೆ ಉತ್ತರವಾಗಿ 92 ಲಕ್ಷದ 39 ಸಾವಿರ ಪರಿಹಾರವನ್ನು ಮೃತಪಟ್ಟವರ ಹಾಗೂ ಗಾಯಗೊಂಡವರ ಕುಟುಂಬಗಳಿಗೆ ನೀಡಲಾಗಿದೆ ಎಂದು ಹೇಳಿದ್ದಾರೆ. ಆದರೆ ನನ್ನ ಉತ್ತರದಲ್ಲಿ ಒಟ್ಟು 1,36,26,99.00 ಬಾಕಿ ಇದೆ, ರೂ. 758.736 ಲಕ್ಷ ಆಸ್ತಿ ಪಾಸ್ತಿ ನಷ್ಟಕ್ಕಾಗಿ ಪರಿಹಾರ ನೀಡಲಾಗಿದೆ ಎಂದು ಹೇಳಿದ್ದಾರೆ. ಇದರಲ್ಲಿ ಯಾವುದು ಸರಿಯಾದುದು ಎಂಬುದರ ಬಗ್ಗೆ ಮಾಹಿತಿ ನೀಡಬೇಕು. 135 ಲಕ್ಷ ಬಾಕಿ ಉಳಿದಿದೆ. ಅದನ್ನು ಕೂಡಲೇ ಒದಗಿಸಲು ಕ್ರಮ ಕೈಗೊಳ್ಳಬೇಕು. ಯಾರು ಗಾಯಗೊಂಡಿದ್ದಾರೆ ಅವರಿಗು ಕೂಡ ಕಾಂಪೆನ್ಸೇಷನ್ ಕೊಡಬೇಕು. ಸರಕಾರದವರು ಆದೇಶ ಹೊರಡಿಸಿ, ಕೆಲವರ ಪ್ರೈವೇಟ್ ನರ್ಸಿಂಗ್

ಹೋಂಗಳಲ್ಲಿ ಟ್ರೀಟ್‌ಮೆಂಟ್ ತೆಗೆದುಕೊಂಡಿದ್ದು ಬಲ್ ಕೊಟ್ಟರೆ ಪರಿಹಾರ ಕೊಡುತ್ತೇವೆಂದು ಹೇಳಿದ್ದಾರೆ. 500 ರೂಪಾಯಿ ಪರಿಹಾರ ಕೊಟ್ಟರೆ ಸಾಕಾಗುವುದಿಲ್ಲ. ಅವರೂ ಎಷ್ಟು ಹಣ ಟ್ರೀಟ್‌ಮೆಂಟಿಗೆ ಖರ್ಚು ಮಾಡುತ್ತಾರೋ ಅಷ್ಟನ್ನು ಕೊಡಿಸಬೇಕು. 1990ರಲ್ಲಿ ಗಲಭೆಯಾದಾಗ ನಷ್ಟ ಹೊಂದಿರುವವರಿಗೆ ಇನ್ನೂ ಪರಿಹಾರ ಕೊಟ್ಟಿಲ್ಲ. ಕೋಲಾರ ಮತ್ತು ಶ್ರೀನಿವಾಸಪುರ ತಾಲ್ಲೂಕುಗಳಲ್ಲಿ ಗಲಭೆಯಾಗಿ ಬೆಳೆಗಳು ಕೂಡ ನಷ್ಟವಾಯಿತು. ಅವರುಗಳಿಗೆ ಯಾವ ಪರಿಹಾರವನ್ನು ಕೊಟ್ಟಿಲ್ಲ. ದಯವಿಟ್ಟು ಸರ್ಕಾರ ಇದರ ಬಗ್ಗೆ ಪರಿಶೀಲಿಸಿ ಆದಷ್ಟು ಜಾಗ್ರತೆ ಪರಿಹಾರ ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಮಾನಾಥ ರೈ:– ಮಾನ್ಯ ಅಧ್ಯಕ್ಷರೇ, ಪ್ರಶ್ನೆಗಳಿಗೆ ಉತ್ತರಗಳು ಸರಿಯಾಗಿವೆ. ನಾನು ಉತ್ತರದಲ್ಲಿ 92–93ರಲ್ಲಿ ನಡೆದ ಗಲಭೆಯಲ್ಲಿ 7,58,76,300.00 ರೂಪಾಯಿ ನಷ್ಟವಾಗಿದೆ ಎಂದು ಹೇಳಿದ್ದೇನೆ. ಹಾಗೂ ನಾವು ನೀಡಲಾಗಿರುವ ಪರಿಹಾರ ಧನ 1,36,26,900 ರೂಪಾಯಿ ಎಂದೂ ಸಹ ಹೇಳಿದ್ದೇನೆ. ಮಾನ್ಯ ಹಿಂಡಸಗೇರಿಯವರ ಪ್ರಶ್ನೆಗೆ ಉತ್ತರವಾಗಿ ರೂ. 92,39.000 ಗಳನ್ನು ಮೃತಪಟ್ಟವರು ಹಾಗೂ ಗಾಯಗೊಂಡವರ ಕುಟುಂಬಗಳಿಗೆ ನೀಡಲಾದ ಪರಿಹಾರ ಧನವೆಂದು ಹೇಳಿದ್ದೇನೆ. ಮೃತಪಟ್ಟವರ ಕುಟುಂಬದವರಿಗೆ ನೀಡಲಾದ ಪರಿಹಾರ ಎಷ್ಟು ಎಂದರೆ 184 ಲಕ್ಷ. ಇತರೆ ತೊಂದರೆಗೊಳಗಾದವರಿಗೂ ಕೂಡ ಪರಿಹಾರ ಕೊಡಬೇಕೆಂದು ಹೇಳಿದ್ದಾರೆ, ನಾನು ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಶಫಿ ಅಹ್ಮದ್:– ಸರ್ಕಾರದ ವತಿಯಿಂದ ಪರಿಹಾರ ಕೊಡುವುದು ಅಷ್ಟೇ ಅಲ್ಲ, ಮೃತಪಟ್ಟ ಕುಟುಂಬದವರಿಗೆ ನೌಕರಿ ಕೂಡುವುದಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ. ಅದರ ಬಗ್ಗೆ ತಾವು ಉತ್ತರ ಏನು ಕೊಡುತ್ತೀರಿ ?

ಶ್ರೀ ರಮಾನಾಥ್ ರೈ:– ವಿಶೇಷವಾಗಿ ಮೃತಪಟ್ಟ ಕುಟುಂಬ ವರ್ಗದವರು ನಿರ್ಗತಿಕರಾದರೆ ಸರ್ಕಾರಿ ಉದ್ಯೋಗ ನೀಡುವ ಭರವಸೆ ಕೊಟ್ಟಿದ್ದೇವೆ. ಆ ಮಾತಿನಂತೆ ನಡೆಯಲಿಕ್ಕೆ ಕ್ರಮ ಕೈಗೊಳ್ಳುತ್ತೇವೆ. ಇದರ ಜೊತೆಗೆ ಶಾಶ್ವತವಾಗಿ ಅಂಗವಿಕಲರಾದವರಿಗೆ ಮಾಸಿಕ 250 ರೂ. ಕೊಡುವಂತಹ ಕಾರ್ಯಕ್ರಮವನ್ನು ಕೂಡ ಸರ್ಕಾರ ಹಾಕಿಕೊಂಡಿದೆ.

ಸಾರಿಗೆ ಸಂಸ್ಥೆಯ ಚಾಲಕ ಮತ್ತು ನಿರ್ವಾಹಕರ ನಡವಳಿಕೆ ಕುರಿತು

87 (1004) ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು):–

ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಚಾಲಕ ಮತ್ತು ನಿರ್ವಾಹಕರುಗಳಿಗೆ ನೀತಿ ಸಂಹಿತೆ ತರಬೇತಿ ನೀಡಲಾಗುತ್ತಿದೆಯೆ;

ಆ) ಹಾಗಿದ್ದಲ್ಲಿ ತರಬೇತಿಯ ಉದ್ದೇಶವೇನು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) ಹೌದು

ಆ) ಈ ಕೆಳಗೆ ಸೂಚಿಸಿರುವ ಉದ್ದೇಶಗಳನ್ನು ಈಡೇರಿಸಲು ಚಾಲಕ ಮತ್ತು ನಿರ್ವಾಹಕರುಗಳಿಗೆ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ:–

1. ಪ್ರಯಾಣಿಕರನ್ನು ಗೌರವದಿಂದ ಕಂಡು ಅವರಿಗೆ ಅತ್ಯಂತ ಸೌಜನ್ಯಪೂರ್ಣವಾದ ಸೇವೆಯನ್ನು